ಬೆಂಗಳೂರು ಡಿಸ್ಟ್ರಿಕ್ಟ್.

ಬೆಂಗಳೂರು ಸಬ್ ಜಡ್ಜೀಯವರ ಕೋರ್ಟಿನಲ್ಲಿ.

1887ನೇ ಇಸವಿ ಮಿ|| ಅರ್ಜೀ ನಂಬರ್ 819.

ಮೃತಪಟ್ಟ ಚನ್ನಪಟ್ಟಣದ ಕಸಬಾ ತಿಟವಮಾನಹಳ್ಳಿಯಲ್ಲಿಯಿದ್ದ ಬೊಮ್ಮೇಗೌಡ್ರಿದ್ದಿಗೌಡನ ಆಸ್ತೀ ವಿಷಯದಲ್ಲಿ—

ಅರ್ಜೀದಾರು) ಸದರೀ ತಿಟವಮಾನಹಳ್ಳಿಯಲ್ಲಿ ಹನುಮಾ ಮೈನರ್ ಇವನ ತಾಯಿ ಲಿಂಗಮ್ಮ ಮೃತಪಟ್ಟ ಸದರೀ ಬೊಮ್ಮೇಗೌಡ್ರಿದ್ದೇಗೌಡರಿಗೆ ಮೈನರ್ ಹನುಮಾ ಮಗನಾಗಬೇಕೆಂಬ ಹಕ್ಕುದಾರೀ ಮೇಲೆ ತಿಟವಮಾನಹಳ್ಳೀ ಸ್ಥಳದ ಮೈನರ್ ಹನುಮಾ ಇವನ ತಾಯಿ ಲಿಂಗಮ್ಮನು ತಿಟವಮಾನಹಳ್ಳೀ ವಾಸಸ್ಥರಾಗಿ ಮೃತಪಟ್ಟ ಬೊಮ್ಮೇಗೌಡ್ರಿದ್ದೇಗೌಡರ ಜಿಂದಗೀ ಬಗ್ಯಾಗಿ ಬರತಕ್ಕ 1000 ರೂಪಾಯಿ ಸಾಲವನ್ನು ವಸೂಲ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಹನುಮಾ ಮೈನರ್ ಇವನ ತಾಯಿ ಲಿಂಗಮ್ಮನ ಅರ್ಜೀಯನ್ನು 1887ನೇ ಇಸವಿ ಅಕ್ಟೋಬರ್ ತಿಂಗಳು ತಾರೀಖು 21ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೀ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಬೊಮ್ಮೇಗೌಡ್ರಿದ್ದೇಗೌಡರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಮಿ|| ಅರ್ಜೀ ನಂಬರ್ 849.

ಮೃತಪಟ್ಟ ನೆಲವಂಗಲದ ತಾಲ್ಲೂಕು ಶಿವಗಂಗೆಯಲ್ಲಿಯಿದ್ದ ಸಿದ್ದಪ್ಪನ ಆಸ್ತೀ ವಿಷಯದಲ್ಲಿ—

ಅರ್ಜೀದಾರು) ಸದರೀ ಶಿವಗಂಗೆಯಲ್ಲಿ ಯಿರುವ ಲಿಂಗಪ್ಪನ ಮಗ ಲಿಂಗಂಣನು ಮೃತಪಟ್ಟ ಸದರೀ ಸಿದ್ದಪ್ಪನಿಗೆ ಅಂಣನಾಗಬೇಕೆಂಬ ಹಕ್ಕುದಾರೀ ಮೇಲೆ ಶಿವಗಂಗೆ ಸ್ಥಳದ ಲಿಂಗಂಣನು ಶಿವಗಂಗೆಯಲ್ಲಿ ವಾಸಸ್ಥರಾಗಿ ಮೃತಪಟ್ಟ ಸಿದ್ದಪ್ಪನ ಜಿಂದಗೀ ಬಗ್ಯಾಗಿ ಬರತಕ್ಕ 950 ರೂಪಾಯಿ ಸಾಲಗಳನ್ನು ವಸೂಲ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಲಿಂಗಂಣನ ಅರ್ಜೀಯನ್ನು 1887ನೇ ಇಸವಿ ಅಕ್ಟೋಬರ್ ತಿಂಗಳು ತಾರೀಖು 21ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೀ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸಿದ್ದಪ್ಪನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಯಿದೆ.

1887ನೇ ಇಸವಿ ಅರ್ಜೀ ನಂಬರ್ 882.

ಕೋಲಾರ ಡಿಸ್ಟ್ರಿಕ್ಟು ಗೋರೀಬಿದನೂರು ತಾಲ್ಲೂಕು ಮಂಚೇನಹಳ್ಳಿ ಸಮ್ಮತು ವುಪ್ಪಾರಹಳ್ಳಿಯಲ್ಲಿ ಮೃತಪಟ್ಟ ಗುಡ್ಡೇಗೌಡನ ಮಗ ತಿಮ್ಮರಾಯಗೌಡನ ಆಸ್ತೀ ವಿಷಯದಲ್ಲಿ—

ಅರ್ಜೀದಾರಳಾದ ಸದರೀ ವುಪ್ಪಾರಹಳ್ಳಿಯಲ್ಲಿಯಿರುವ ತಿಪ್ಪಮ್ಮನು ಮೃತಪಟ್ಟ ಸದರೀ ತಿಮ್ಮರಾಯಗೌಡನಿಗೆ ತಾಯಿ ಆಗಬೇಕೆಂಬಹಕ್ಕುದಾರೀ ಮೇಲೆ ಸದರೀ ವುಪ್ಪಾರಹಳ್ಳೀ ಸ್ಥಳದ ತಿಪ್ಪಮ್ಮನು ಸದರೀ ವುಪ್ಪಾರಹಳ್ಳಿಯಲ್ಲಿ ವಾಸಸ್ಥನಾಗಿ ಮೃತಪಟ್ಟ ತಿಮ್ಮರಾಯಗೌಡನ ಜಿಂದಗೀ ಬಗ್ಯಾಗಿ ಬರತಕ್ಕ 700 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರಳಾದ ತಿಪ್ಪಮ್ಮನ ಅರ್ಜೀಯನ್ನು 1887ನೇ ಇಸವಿ ನವಂಬರ್ ತಿಂಗಳು ತಾರೀಖು 4ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೀ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ತಿಮ್ಮರಾಯಗೌಡನ ಆಸ್ತಿಗೆ ಹಕ್ಕುದಾರರಾದವಿಸಿಷ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಮಿಸಲೀನಿಯಸ್ ನಂಬರ್ 718.

ಮೃತಪಟ್ಟ ಬೆಂಗಳೂರು ದೊಡ್ಡಪ್ಯಾಟೆಯಲ್ಲಿ ಯಿದ್ದು ಕಾಯಿ ಅಂಗಡಿ ದೊಡ್ಡಬಸಪ್ಪನಿಗೆ, ಮುರಡಪ್ಪನೆಂಬುವನು ಮೈನರ್ ಮಗನಾಗಬೇಕೆಂದುನ್ನು ಅವನ ಅಂಣ ಮುದ್ದಬಸಪ್ಪ ನೆಂಬುವನು ತನ್ನನ್ನ ಮೈನರ್ ಗಾರ್ಡಿಯನ್ನಾಗಿ ಮೊಕರರು ಮಾಡಬೇಕೆಂದುನ್ನು ವಗೈರೆ ಸದರೀ ಮುದ್ದಬಸಪ್ಪನು ಅರ್ಜೀ ಕೊಟ್ಟು ಯಿರುತ್ತಾನೆ.

ಸದರೀ ದರಖಾಸ್ತುದಾರನಾದ ಮುದ್ದಬಿಸಪ್ಪನ ಅರ್ಜೀಯನ್ನು 1887ನೇ ಇಸವಿ ಅಕ್ಟೋಬರ ತಿಂಗಳು 14ನೇ ತಾರೀಖಿನ ದಿನ ಕೇಳಿ ಸದರೀ ಯವನ ಹೆಸರಿಗೆ ಗಾರ್ಡಿಯ್ಯ. ಸರ್ಟಿಫಿಕೇಟ್ ಪಡಿಯತಕ್ಕ ಭಾಧ್ಯತೆಯನ್ನು ವಿಮರ್ಶೀ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಸರ್ಟಿಫಿಕೇಟನ್ನ ಕೊಡಿಸಕೂಡದೆಂಬುವದಕ್ಕೆ ತಕರಾರುವುಳ್ಳ ಹಕ್ಕುದಾರರು ಯಾರಾದರೂ ಇದ್ದಲ್ಲಿ ಕೋರ್ಟಿಗೆ ಹಾಜರಾಗಿ ತಿಳಿಸತಕ್ಕದ್ದಿಧೆಯಂದು ಯಿದರಿಂದ ತಿಳಿಸಲ್ಪಟ್ಟು ಯಿದೆ.

1887ನೇ ಇಸವಿ ಸೆಪ್ಟಂಬರ್ ತಿಂಗಳು 23ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೇ ಕೊಡೋಣಾಗಿದೆ.

ಸಿ. ಕೈನ್ಸ್,
ಸಬ್ ಜಡ್ಜ್.

ತುಮಕೂರು ಡಿಸ್ಟ್ರಿಕ್ಟ್.

ತಾರೀಖು 21ನೇ ಸೆಪ್ಟಂಬರ್ 1887.

ತಿಪ್ಪೂರು ತಾಲ್ಲೂಕು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಬೇವಾರಸಾಗಿರತಕ್ಕ ಈ ಕೆಳಗೆ ವಿವರಿಸೋಣಾಗಿರುವ ದಸ್ತೈವಜನ್ನ ಹಾಜರ್ ಮಾಡಿದವರೇ ಆಗಲಿ ಅಥವಾ ಅವರಿಂದ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕರು ಯಾ ಹಕ್ಕುದಾರ್ರೇ ಆಗಲಿ ಈ ನೋಟೀಸ್ ತಾರೀಖು ಲಾಗಾಯತು ಒಂದು ತಿಂಗಳೊಳಗಾಗಿ ತಿಪ್ಪೂರು ಸಬ್ ರಿಜಿಸ್ಟ್ರಾರಲ್ಲಿ ಹಾಜರಾಗಿ ಸದರೀ ದಸ್ತೈವಜನ್ನ ವಾಪಸ್ ಪಡಿಯಲೂ ತಪ್ಪಿದರೆ ಸ್ರ 1877ನೇ ಇಸವಿ ಇಂಡಿಯನ್ ರಿಜಿಸ್ಟ್ರೇಷನ್ ಆಕ್ಟಿನ 85ನೇ ಸೆಕ್ಷನ್ ಅನುಸರಿಸಿ ನಾಶ ಮಾಡಲ್ಪಡುವದು:—

ದಸ್ತೈವಜಿನ ನಂಬರ್.	ಕಾಣಿಕೆ ಹಣ ಪಾವತಿ ಆದ ತಾರೀಖು.	ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಹಾಜರಾದ ತಾರೀಖು.	ದಸ್ತೈವಜನ್ನ ಬರದು ಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತೈವಜನ್ನ ಬರಸಿ ಕೊಂಡವರ ಹೆಸರು ಮತ್ತು ವಾಸಸ್ಥಳ.	ದಸ್ತೈವಜಿನ ಸ್ವಭಾವ ಮತ್ತು ಕಿಮ್ಮತ್ತು.
182 1885—86	8—11—85	15—11—85	29—11—85	ತಿಪ್ಪೂರು ತಾಲ್ಲೂಕು ನೊಣವಿನಕೆರೇ ಸಮ್ಮತು ಮಾಕನಹಳ್ಳಿ ಗ್ರಾಮಕ್ಕೆ ಸೇರಿದ ಚಿಕ್ಕಣ್ಣ ಕಟ್ಟಿ ಪಾಳ್ಯದಲ್ಲಿರುವ ಕಮಾಚಾರದ ಬಳೇ ಪುಟ್ಟೇರಯ್ಯನ ಮಗ ಚನ್ನಬಸಯ್ಯ	ತಿಪ್ಪೂರು ತಾಲ್ಲೂಕು ನೊಣವಿನಕೆರೇಯಲ್ಲಿರುವ ಹೊಸಮನೆ ನಾರಣಸಾಮಯ್ಯಂಗಾರ್	ತನ್ನ ಬಾಬತು ತಿಪ್ಪೂರು ತಾಲ್ಲೂಕು ನೊಣವಿನಕೆರೇ ಸಮ್ಮತು ವಿಗ್ನ ಸಂತೆ ಗ್ರಾಮದ ಕೆರೇಹಿಂದೆ ಇರುವ ಅಡಿಕೆ, ತೆಂಗೂ ಮಿಶ್ರವಾದ ಸರ್ವೇನಂಬರ್ 92 ಎಕರೆ 1 ಕುಂಟೆ 19 ಆಕಾರ 15 ರೂಪಾಯಿವುಳ್ಳ ತೋಟ ಆಧಾರದ ವಂದು ನೂರು ರೂಪಾಯಿನ ಕಂತು ಪತ್ರ.

ಪಿ. ಎ. ಕೃಷ್ಣಮೂರ್ತಿ, ರಿಜಿಸ್ಟ್ರಾರ್.

ಮೈಸೂರು ಡಿಸ್ಟ್ರಿಕ್ಟ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜ್‌ಯವರ ಕೋರ್ಟಿನಲ್ಲಿ.

1887ನೇ ಇಸವಿ ಅರ್ಜೀ ನಂಬರ್ 513.

ಮೃತಪಟ್ಟ ಗುಂಡಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ ರಾಚಪ್ಪ ಮೈನರ್ ಗಾರ್ಡಿಯ್ಯ ಮತ್ತು ತಾಯಿ ಮಾದಮ್ಮನು ಮೃತಪಟ್ಟ ಸದರೀ ಗುಂಡಪ್ಪನವರಿಗೆ ಮಗನು ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ ಮೈಸೂರು ಕಿಲ್ಲೇ ಸ್ಥಳದ ಮೈನರ್ ಗಾರ್ಡಿಯ್ಯ ಮಾದಮ್ಮನು ಸದರೀ ವಾಸಸ್ಥನಾಗಿ ಮೃತಪಟ್ಟ ಗುಂಡಪ್ಪನವರ ಜಿಂದಗೀ ಬಗ್ಯಾಗಿ ಬರತಕ್ಕ 300 ರೂಪಾಯಿಗಳ ಸಾಲವನ್ನು ವಸೂಲ್‌ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಪಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರೆಳಾದ ಮಾದಮ್ಮನವರ ಅರ್ಜೀಯನ್ನು 1887ನೇ ಇಸವಿ ಅಕ್ಟೋಬರ್ ತಿಂಗಳು ತಾರೀಖು 31ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೀ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಗುಂಡಪ್ಪನವರ ಆಸ್ತಿ